

ಮತ್ತೊಂದು ಪ್ರಸಂಗದಲ್ಲಿ ಇನ್ನೊಬ್ಬ ಭಕ್ತ ಶ್ರೀರಾಮಕೃಷ್ಣರನ್ನು ಈ ರೀತಿ ಪ್ರಶ್ನಿಸಿದ: "ನಾವು ಸಂಸಾರದಲ್ಲಿ ಯಾವ ರೀತಿಯಾಗಿ ಇರಬೇಕು?" ಅದಕ್ಕೆ ಶ್ರೀರಾಮಕೃಷ್ಣರು, "ಸಂಸಾರದಲ್ಲಿ ಎಲ್ಲ ಕೆಲಸ–ಕಾರ್ಯಗಳನ್ನೂ ಮಾಡು. ಆದರೆ ಮನಸ್ಸನ್ನು ಮಾತ್ರ ಭಗವಂತನ ಪಾದಪದ್ಮಗಳಲ್ಲಿ ಇಡು. ಎಲ್ಲರೊಡನೆ ಎಂದರೆ, ಹೆಂಡತಿ, ಮಕ್ಕಳು, ತಂದೆ, ತಾಯಿ – ಇವರೊಡನೆ ಇರು. ಅವರ ಸೇವೆ ಮಾಡು. ಅವರೆಲ್ಲರನ್ನೂ ನಿನ್ನ ಪರಮ ಆಪ್ತರೆಂದೇ ಕಾಣು; ಆದರೆ ಅವರಾರೂ ನಿನಗೆ ಸೇರಿದವರಲ್ಲ ಎಂಬುದು ನಿನ್ನ ಹೃದಯಾಂತರಾಳದಲ್ಲಿ ನೆಲಸಿರಲಿ" ಎಂದರು.

ಶ್ರೀರಾಮಕೃಷ್ಣರು ಮತ್ತು ಶ್ರೀಶಾರದಾದೇವಿಯವರು ಒಂದು ಆದರ್ಶ ಕುಟುಂಬಜೀವನವನ್ನು ನಡೆಸಿದರು. ಆದರೆ ಅದು ಅತಿ ಉಚ್ಚಮಟ್ಟದ ಆದರ್ಶ ಜೀವನ. ಅಂತಹ ಕುಟುಂಬಜೀವನವನ್ನು ನಾವು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಶ್ರೀರಾಮಕೃಷ್ಣರು ಶ್ರೀಮಾತೆಯವರಿಗೆ ಒಂದು ಆದರ್ಶ ಜೀವನವನ್ನು ನಡೆಸಲು ತಿಳಿಸಿದರು. ಶ್ರೀಮಾತೆಯವರು ಕೊನೆಯ ದಿನಗಳಲ್ಲಿ ಹೇಳಿದರು: "ನನ್ನ ಪತಿ ನನಗೆ ಒಂದು ಆದರ್ಶ ಜೀವನ ನಡೆಸಲು ತಿಳಿಸಿದರು, ನಾನು ಅದಕ್ಕಿಂತ ಸ್ವಲ್ಪ ಹೆಚ್ಚಾಗಿಯೇ ಬಾಳಿದ್ದೇನೆ." ಶ್ರೀರಾಮಕೃಷ್ಣರೂ ಅಷ್ಟೆ. ಆದರ್ಶ ಪತಿಗಿಂತ ಸ್ವಲ್ಪ ಹೆಚ್ಚಾಗಿಯೇ ಬಾಳಿದರು. ಅವರು ಯಾವಾಗಲೂ "ನರೇಂದ್ರ, ನರೇಂದ್ರ" ಎಂದು ತುಂಬಾ ಹಚ್ಚಿಕೊಂಡಿದ್ದರು. ಒಂದು ದಿನ ನರೇಂದ್ರ ಅವರಿಗೆ ಹೇಳಿದ, "ಜಿಂಕೆಯನ್ನು ಚಿಂತಿಸಿ, ಚಿಂತಿಸಿ ಭರತ, ಮುಂದಿನ ಜನ್ಮದಲ್ಲಿ ಜಿಂಕೆಯಾಗಿ ಹುಟ್ಟಿದ. ಹೀಗೆ ನೀವು ಹಗಲೂ ರಾತ್ರಿ ನನ್ನನ್ನೇ ನೆನೆಯುತ್ತಿದ್ದರೆ, ನಿಮ್ಮ ಪಾಡೂ ಅದೇ ಆಗುವುದು." ಶ್ರೀರಾಮಕೃಷ್ಣರು ಗಾಬರಿಯಾಗಿ ಕಾಳೀಮಾತೆಯ ಬಳಿ ಹೋಗಿ, ಕೇಳಿದರು. ನಂತರ ಹಿಂತಿರುಗಿ ಬಂದು ನರೇಂದ್ರನಿಗೆ ಹೇಳಿದರು, "ನಿನ್ನಲ್ಲಿ ನಾನು ನಾರಾಯಣನನ್ನೇ ಕಾಣದಿದ್ದರೆ ನಿನ್ನ ಮುಖವನ್ನು ಕೂಡ ನೋಡುವುದಿಲ್ಲ." ಅಂದರೆ ನರೇಂದ್ರನಲ್ಲಿ ಅವರು ಸದಾ ನಾರಾಯಣನನ್ನು ಕಾಣುತ್ತಿದ್ದುದರಿಂದ ಅಂತಹ ಆಸಕ್ತಿಯನ್ನು ಬೆಳೆಸಿಕೊಂಡಿದ್ದರು. ಶ್ರೀಮಾತೆಯವರೂ ಅಷ್ಟೆ. ರಾಧುವನ್ನು ಎಷ್ಟು ಹಚ್ಚಿಕೊಂಡಿದ್ದರೆಂದರೆ, ಅವರೂ ಸಂಸಾರದಲ್ಲಿ ಸಿಕ್ಕಿಕೊಂಡು ಇವಳಿಲ್ಲದೆ ಬದುಕಲಾರದಂತೆ ಇದ್ದಾರೆ ಎಂದು ಸಾಧಾರಣ ಮನುಷ್ಯರಿಗೆ ಅನ್ನಿಸುತ್ತಿತ್ತು. ಆದರೆ ಶ್ರೀಮಾತೆಯವರು ತಮ್ಮ ಕೊನೆಯ ದಿನಗಳಲ್ಲಿ ಆಕೆಯ ಮುಖವನ್ನು ನೋಡಲು ಕೂಡ ಇಷ್ಟಪಡುತ್ತಿರಲಿಲ್ಲ.

ಆದರ್ಶ ಕುಟುಂಬಜೀವನವನ್ನು ನಡೆಸುವುದೆಂದರೆ ಸಂಸಾರದಲ್ಲಿದ್ದುಕೊಂಡೇ ಭಗವಂತನ ಸಾಕ್ಷಾತ್ಕಾರಕ್ಕೆ ಪ್ರಯತ್ನಪಡುವುದು. ಆದರೆ ಸಂಸಾರದ ಜಂಜಾಟದಲ್ಲಿ ನಮಗೆ ಭಗವಂತನನ್ನು ನೆನೆಯಲೂ ಸಮಯವಿಲ್ಲ. ಅಂತಹ ಒಬ್ಬ ಭಕ್ತ ಶ್ರೀರಾಮಕೃಷ್ಣರನ್ನು, "ಮಹಾಶಯರೇ, ಇದಕ್ಕೆಲ್ಲ ಸಮಯವೆಲ್ಲಿದೆ?" ಎಂದು ಪ್ರಶ್ನಿಸಿದ. ಅದಕ್ಕೆ ಶ್ರೀರಾಮಕೃಷ್ಣರು, "ಯಾರಿಗೆ ಸಮಯವಿರುವುದೋ ಅವರು ಧ್ಯಾನ, ಭಜನೆ ಮಾಡಲೇಬೇಕು. ಆದರೆ ಯಾರಿಗೆ ಸಮಯವಿಲ್ಲವೋ ಅವರು ದಿನಕ್ಕೆ ಎರಡು ವೇಳೆ ಹೃತ್ಪೂರ್ವಕವಾಗಿ ಭಗವಂತನಿಗೆ ನಮಸ್ಕಾರ ಹಾಕಲಿ. ಆತ ಅಂತರ್ಯಾಮಿ. ಆತನಿಗೆ ಗೊತ್ತಿದೆ, 'ಇವರು ಇನ್ನೇನು ತಾನೆ ಮಾಡಿಯಾರು, ಇವರಿಗೆ ಬೇಕಾದಷ್ಟು ಕೆಲಸಕಾರ್ಯಗಳಿವೆಯಲ್ಲ' ಎಂದು. ಆತನಿಗೆ ನಿಮ್ಮ ವಕಾಲತ್ತನ್ನು ವಹಿಸಿಬಿಡಿ. ಆದರೆ ನೋಡಿಕೊಳ್ಳಿ, ಆತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳದೆ ಹೋದಿರಿ ಎಂದರೆ, ಆತನ ದರ್ಶನವನ್ನು ಮಾಡಿಕೊಳ್ಳದೆ ಹೋದಿರಿ ಎಂದರೆ, ಜೀವನ ವ್ಯರ್ಥವಾದಂತೆ" ಎಂದು ಹೇಳಿದರು.

ಆದರ್ಶ ಕುಟುಂಬ ನಡೆಸಬೇಕಾದರೆ ಮೊದಲು ನಮ್ಮ ಕರ್ತವ್ಯಗಳ ಬಗ್ಗೆ ಸರಿಯಾದ ಅರಿವಿರಬೇಕು. ಇದರ ಬಗ್ಗೆ ಶ್ರೀರಾಮಕೃಷ್ಣರ ಸಂದೇಶ ಹೀಗಿದೆ: "ಖಂಡಿತವಾಗಿಯೂ ನೀವು ನಿರ್ವಹಿಸಬೇಕಾದ ಕರ್ತವ್ಯಗಳಿವೆ. ಮಕ್ಕಳನ್ನು ಪೋಷಿಸಬೇಕು, ಪತ್ನಿಯನ್ನು ಸಾಕಬೇಕು, ನಿಮ್ಮ ಮರಣಾನಂತರ ಅವಳಿಗೆ ಜೀವನೋಪಾಯದ ವ್ಯವಸ್ಥೆ ಮಾಡಬೇಕು. ನೀವು ಇವನ್ನು ಮಾಡದಿದ್ದರೆ, ನಿಮ್ಮನ್ನು ಕ್ರೂರಿಗಳೆಂದು ಕರೆಯಬೇಕಾಗುತ್ತದೆ. ಶುಕದೇವರಂಥ ಋಷಿಗಳಿಗೂ ಅನುಕಂಪವಿತ್ತು. ಅನುಕಂಪವಿಲ್ಲದವನು ಮಾನವನೇ ಅಲ್ಲ." ಶ್ರೀರಾಮಕೃಷ್ಣರು ಹೀಗೆ ಹೇಳುತ್ತಿದ್ದಾಗ ಮತ್ತೊಬ್ಬ ವ್ಯಕ್ತಿ ಮಕ್ಕಳನ್ನು ಎಷ್ಟು ಕಾಲ ಪೋಷಿಸಬೇಕೆಂದು ಪ್ರಶ್ನಿಸಿದ. ಅದಕ್ಕೆ ಶ್ರೀರಾಮಕೃಷ್ಣರು, "ಅವರು ಪ್ರಾಪ್ತವಯಸ್ಸು ಮುಟ್ಟುವವರೆಗೂ ಪೋಷಿಸಬೇಕು" ಎಂದರು.

ಪ್ರತಿಯೊಬ್ಬ ತಂದೆಯೂ ಮಕ್ಕಳನ್ನು ಕುರಿತು, "ನೀವು ಪ್ರಾಪ್ತವಯಸ್ಸಿಗೆ ಬಂದಿರುವಿರಿ. ನಿಮ್ಮನ್ನು ನೀವೇ ನೋಡಿಕೊಳ್ಳಿ" ಎಂದು ಹೇಳಬೇಕು. ಮಕ್ಕಳನ್ನು ಸ್ವಾವಲಂಬಿಗಳಾಗಿ ಮಾಡಬೇಕು. ಮಕ್ಕಳು ಸ್ವಾವಲಂಬಿಗಳಾದ ನಂತರ ಅವರ ವಿಷಯದಲ್ಲಿ ತಂದೆತಾಯಿಗಳ ಹೊಣೆ ಇರುವುದಿಲ್ಲ. ಈ ಹಂತವನ್ನು ಮುಟ್ಟಿದನಂತರ ಮಕ್ಕಳು ಇಚ್ಛಿಸಿದ್ದನ್ನು ಮಾಡಲು ಅವರಿಗೆ ಅವಕಾಶ ನೀಡಬೇಕು. 'ಬೇಕು–ಬೇಡ' ಎಂದು ಹೇಳಬಾರದು. ಇದೇ ನಿರ್ಲಿಪ್ತತೆಯ ನಿಜವಾದ ಪರೀಕ್ಷೆ. ಮಕ್ಕಳು ಸ್ವಾವಲಂಬಿಗಳಾದರೂ, ಕೆಲವು ತಂದೆತಾಯಿಗಳು ಅವರನ್ನು ಬಿಡುವುದಿಲ್ಲ. ಮಕ್ಕಳಿಂದ ಅವರು ಹಣವನ್ನು ನಿರೀಕ್ಷಿಸದಿದ್ದರೂ, ತಮ್ಮಿಂದ ಸದಾ ಬುದ್ಧಿವಾದ ಪಡೆಯಬೇಕೆಂದು ನಿರೀಕ್ಷಿಸುತ್ತಾರೆ. ಈ ನಿರೀಕ್ಷೆಯಿಂದ ದುಃಖ ಅನುಭವಿಸುತ್ತಾರೆ.

ತಂದೆತಾಯಿಗಳ ಧೋರಣೆ ಹೀಗಿರಬೇಕು: "ಮಕ್ಕಳಿಗೆ ಮಾಡಬೇಕಾದುದೆಲ್ಲವನ್ನೂ ಮಾಡಿದ್ದೇವೆ. ಇನ್ನು ನಾವು ಅವರಿಂದ ದೂರ ಇದ್ದು, ಆಧ್ಯಾತ್ಮಿಕತೆಯತ್ತ ಗಮನ ಹರಿಸುತ್ತೇವೆ. ಅವರಿಗೆ ಶುಭವಾಗಲಿ ಎಂದು ಅವರ ಒಳಿತಿಗಾಗಿ ಪ್ರಾರ್ಥಿಸುತ್ತೇವೆ."

ಹಿಂದೂಧರ್ಮದಲ್ಲಿ ಪತ್ನಿಯನ್ನು 'ಸಹಧರ್ಮಿಣಿ', ಅಂದರೆ, ಧರ್ಮಾಚರಣೆಯಲ್ಲಿ ಸಹಭಾಗಿ ಎಂದು ಕರೆಯುತ್ತಾರೆ. ಒಂದು ಕುಟುಂಬವು ಆದರ್ಶ ಕುಟುಂಬವಾಗಬೇಕಾದರೆ, ಪತ್ನಿಯು ಪತಿಯ ನೈತಿಕ ಮತ್ತು ಆಧ್ಯಾತ್ಮಿಕ ಸಾಧನೆಯಲ್ಲಿ ಸಹಕರಿಸಬೇಕು. ಹಾಗೆಯೇ ಪತಿಗೂ ಪತ್ನಿಯ ವಿಷಯದಲ್ಲಿ ಒಂದು ಹೊಣೆಗಾರಿಕೆ ಇದೆ. ಅವಳು ಅವನ ಜೀವನದ ಸಂಗಾತಿ. ಶ್ರೀರಾಮಕೃಷ್ಣರು ಶ್ರೀಶಾರದಾದೇವಿಯವರಿಗೆ ಎಷ್ಟು ಗೌರವ ತೋರಿಸುತ್ತಿದ್ದರೆಂದರೆ, ಶ್ರೀಮಾತೆಯವರೇ ಹೇಳುತ್ತಾರೆ, "ನನ್ನ ಗಂಡ ನನಗೆ ಹೂವಿನಿಂದಲೂ ಹೊಡೆದು, ನೋಯಿಸಿಲ್ಲ" ಎಂದು.

ಶ್ರೀರಾಮಕೃಷ್ಣರು ತಮ್ಮ ಜೀವನದಿಂದ, ಉಪದೇಶಗಳಿಂದ ಒಂದು ಆದರ್ಶ ಕುಟುಂಬಜೀವನವನ್ನು ಹೇಗೆ ನಡೆಸಬಹುದು ಎಂಬುದನ್ನು ನಮಗೆಲ್ಲ ತೋರಿಸಿದ್ದಾರೆ. ಅಂತಹ ಜೀವನ ನಡೆಸುವ ಆಸೆಯಿದ್ದವರು, 'ಶ್ರೀರಾಮಕೃಷ್ಣ ವಚನವೇದ' ವನ್ನು ಶ್ರದ್ಧೆಯಿಂದ ಪ್ರತಿದಿನ ಓದಿದರೆ ಸಾಕು. ನಮಗೆ ಬೇಕಾಗುವ ಎಲ್ಲ ಮಾರ್ಗದರ್ಶನವೂ ಅದರಲ್ಲಿ ದೊರೆಯುತ್ತದೆ. ಆಗ ನಮ್ಮ ಜೀವನ ನಿಜವಾಗಿಯೂ 'ಆನಂದಮಯ'ವಾಗುತ್ತದೆ. •

## ನಮ್ಮ ದುಃಖಗಳಿಗೆಲ್ಲ ಮೂಲಕಾರಣ

**ಒಂದೂರಿನಲ್ಲಿ ಬೆಸ್ತನೊಬ್ಬ ಮೀನನ್ನು ಹಿಡಿಯುತ್ತಿದ್ದ. ಒಂದು ಹದ್ದು ಹಾರಿ ಬಂದು ಒಂದು ಮೀನನ್ನು ಕಚ್ಚಿಕೊಂಡಿತು. ಮೀನನ್ನು ಕಂಡ ಒಡನೆಯೆ ನೂರಾರು ಕಾಗೆಗಳು ಅದನ್ನು ತೆಗೆದುಕೊಳ್ಳುವುದಕ್ಕಾಗಿ ಕೂಗಾಟವೆಬ್ಬಿಸಿದವು. ಹದ್ದು ಯಾವ ಕಡೆಗೆ ಹೋದರೂ ಕಾಗೆಗಳು ಅದನ್ನು ಹಿಂಬಾಲಿಸಿದವು. ಹದ್ದು ದಕ್ಷಿಣಕ್ಕೆ ಹಾರಿತು. ಕಾಗೆಗಳು ಅಲ್ಲಿಗೂ ಹೋದವು. ಹದ್ದು ಉತ್ತರಕ್ಕೆ ಹಾರಿತು. ಆದರೂ ಕಾಗೆಗಳು ಅದನ್ನು ಹಿಂಬಾಲಿಸಿದವು. ಹದ್ದು ಪೂರ್ವ ಮತ್ತು ಪಶ್ಚಿಮಕ್ಕೆ ಹಾರಿತು. ಅಲ್ಲಿಯೂ ಅದನ್ನು ಬಿಡಲಿಲ್ಲ. ಗಾಬರಿಯಿಂದ ಹದ್ದು ಹಾರಾಡುತ್ತಿರುವಾಗ, ಅದು ಕಚ್ಚಿಕೊಂಡಿದ್ದ ಮೀನು ಕೆಳಗೆ ಬಿತ್ತು. ಹದ್ದನ್ನು ಕಾಗೆಗಳು ಹಾಗೆಯೇ ಬಿಟ್ಟು ಮೀನನ್ನು ಹಿಂಬಾಲಿಸಿದವು. ಈ ಗೊಂದಲದಿಂದ ಪಾರಾದ ಮೇಲೆ ಹದ್ದು ಒಂದು ಮರದ ಮೇಲೆ ಕುಳಿತುಕೊಂಡು, "ಅನಿಷ್ಟ ಮೀನೇ ಇದಕ್ಕೆಲ್ಲ ಕಾರಣ. ಅದನ್ನು ಈಗ ಎಸೆದಿರುವೆನು. ಈಗ ನನಗೆ ಶಾಂತಿ" ಎಂದು ಯೋಚಿಸಿತು. ಎಲ್ಲಿಯವರೆಗೆ ಒಬ್ಬನಿಗೆ ಮೀನು ಇದೆಯೋ, ಅಂದರೆ ಪ್ರಾಪಂಚಿಕ ಆಸೆ ಆಕಾಂಕ್ಷೆಗಳು ಇವೆಯೋ ಅಲ್ಲಿಯವರೆಗೆ ತೊಂದರೆ ತಾಪತ್ರಯ ತಪ್ಪಿದ್ದಲ್ಲ. ಯಾವಾಗ ಅವನು ಅದನ್ನು ತ್ಯಜಿಸುವನೋ ಆಗ ಅವನ ಗಲಿಬಿಲಿಯೆಲ್ಲ ಹೋಗಿ ಪ್ರಶಾಂತಿಯನ್ನು ಅನುಭವಿಸುವನು.**

–ಶ್ರೀರಾಮಕೃಷ್ಣ

# ಮೌಲ್ಯಯುತ ಜೀವನದಿಂದ ಆದರ್ಶ ಕುಟುಂಬ

ಸ್ವಾಮಿ ನಿತ್ಯಸ್ಥಾನಂದ

**ಸಾ**ಮಾನ್ಯವಾಗಿ ನಾವು ಒಂದು ಕುಟುಂಬಕ್ಕೂ ಮನೆಗೂ ಸಂಬಂಧವನ್ನು ಕಲ್ಪಿಸುತ್ತೇವೆ. ಆದರೆ ಎಲ್ಲ ಕುಟುಂಬಗಳೂ ಮನೆಯೊಳಗೇ ಇರಬೇಕೆಂಬ ನಿಯಮವೇನೂ ಇಲ್ಲ. ಭಾರತದಂತಹ ದೇಶಗಳಲ್ಲಿ ಮನೆಯಿಲ್ಲದ ಕುಟುಂಬಗಳು ಅಸಂಖ್ಯ ಇರಲು ಸಾಧ್ಯ. ಮನೆ ಎಂಬುದು ಒಂದು ಹೊರಗಣ ಆಸರೆ ಮಾತ್ರ. ಇಂತಹ ಆಸರೆ ಕೇವಲ ಕುಟುಂಬಗಳಿಗೆ ಮಾತ್ರವಲ್ಲ, ಎಲ್ಲ ಸಂಘಸಂಸ್ಥೆಗಳಿಗೂ, ಕಛೇರಿ ಮುಂತಾದವುಗಳಿಗೂ ಅತ್ಯವಶ್ಯಕ. ಅನುಕೂಲಕ್ಕೆ ತಕ್ಕಂತೆ ಮನೆಗಳ ವಿನ್ಯಾಸ ಬದಲಾಗಬಹುದು ಅಷ್ಟೇ.

ಆದರೆ ಇನ್ನೊಂದು ರೀತಿಯ ಆಸರೆ ಇದೆ – ಅದು ಭಾವನಾತ್ಮಕವಾದುದು; ಕಲ್ಲು, ಮಣ್ಣು, ಕಬ್ಬಿಣಗಳಿಂದ ನಿರ್ಮಿತವಾದುದಲ್ಲ. ಈ ಆಸರೆ ಭೌತಿಕ ಆಸರೆಗಿಂತಲೂ ಅತ್ಯಂತ ಮುಖ್ಯ. ಎಂತಹ ಭವ್ಯವಾದ ಭೌತಿಕ ಮನೆಯಿದ್ದರೂ ಈ 'ಭಾವ'ದ ಅರಮನೆ ಇಲ್ಲದಿದ್ದರೆ ಅದು ಆದರ್ಶ ಕುಟುಂಬವೆನಿಸುವುದಿಲ್ಲ. ಸಂಸ್ಕೃತದಲ್ಲಿ 'ಆದರ್ಶ' ವೆಂದರೆ ಕನ್ನಡಿ ಎಂದರ್ಥ. ಕನ್ನಡಿಯು ಇತರ ವಿಷಯಗಳನ್ನು ಪ್ರತಿಬಿಂಬಿಸುತ್ತದೆ. ಕುಟುಂಬದಲ್ಲಿ ಎಲ್ಲರೂ ಒಂದೊಂದು ಕನ್ನಡಿ ಇದ್ದಂತೆ. ಒಬ್ಬನಲ್ಲಿ ಪ್ರೀತಿಯ ಭಾವವಿದ್ದರೆ ಅದು ಇತರರಲ್ಲಿಯೂ ಪ್ರತಿಬಿಂಬಿತವಾಗುತ್ತದೆ, ದ್ವೇಷಭಾವನೆಯಿದ್ದರೆ ಅದೇ ಪ್ರತಿಬಿಂಬಿತವಾಗುತ್ತದೆ. ಆದ್ದರಿಂದ ಈ ಆದರ್ಶವು (ಕನ್ನಡಿ) ನಾವು ಯಾವಾಗಲೂ ಸದ್ಭಾವನೆಯಿಂದ ಕೂಡಿರಬೇಕೆಂಬುದನ್ನು ಸೂಚಿಸುತ್ತದೆ.

ಒಬ್ಬ ಶ್ರೀಮಂತನಿರುತ್ತಾನೆ. ಅವನು ಒಂದು ಒಳ್ಳೆ ಜಾತಿಯ ನಾಯಿಯನ್ನು ಸಾಕಿದ್ದನು. ಮನೆ ಎಂದರೆ ನಾಯಿ ಇರಲೇಬೇಕಲ್ಲವೆ! ಹಿಂದೆ ಮನೆಗೆ ಮಕ್ಕಳೇ ಭೂಷಣ ಎನ್ನುತ್ತಿದ್ದರು, ಈಗ ಮನೆಗೆ ನಾಯಿಯೇ ಭೂಷಣ ಎನ್ನುವಂತಾಗಿದೆ. ಹಿಂದೆ ಮನೆಯಲ್ಲಿ ಜಗಳವಾಡುವುದು ಕೇಳಿಸುತ್ತಿತ್ತು. ಈಗ ನಾಯಿ ಬೊಗಳುವುದನ್ನು ಮಾತ್ರ ಕೇಳುವಂತಾಗಿದೆ. ಗಂಡಹೆಂಡತಿಯರಿಗೆ ಈಗ ಜಗಳ ಮಾಡುವುದಕ್ಕೂ ಪುರುಸೊತ್ತಿಲ್ಲ! ಅದೇನೇ ಇರಲಿ. ನಮ್ಮ ಶ್ರೀಮಂತನ ನಾಯಿ ಮನೆಯೊಳಗೆಲ್ಲ ಓಡಾಡಿಕೊಂಡಿತ್ತು. ಆದರೆ ಒಂದು ಕೊಠಡಿಗೆ ಮಾತ್ರ ನಾಯಿಗೆ ಪ್ರವೇಶವಿರಲಿಲ್ಲ. ಆ ಕೋಣೆಯ ಪೂರ್ತಿ ಗೋಡೆಗೆ ಕನ್ನಡಿಗಳನ್ನು ಅಳವಡಿಸಲಾಗಿತ್ತು. ಆ ಕೊಠಡಿಗೆ ನಾಯಿ ಹೋಗದಂತೆ ಎಚ್ಚರಿಕೆ ವಹಿಸಿದ್ದರು. ಒಂದು ದಿನ ಮನೆಯಿಂದ ಹೊರಗೆ ಹೋಗುವಾಗ ಶ್ರೀಮಂತನು ಆ 'ಆದರ್ಶ' ಕೊಠಡಿಯ ಬಾಗಿಲು ಮುಚ್ಚುವುದನ್ನು ಮರೆತುಬಿಟ್ಟನು. ಸ್ವಲ್ಪ ಹೊತ್ತಿನ ನಂತರ ಈ ವಿಷಯ ನೆನಪಾದ ಕೂಡಲೆ ಗಾಬರಿಯಿಂದ ಮನೆಯ ಕಡೆ ಧಾವಿಸಿದನು. ನೇರವಾಗಿ 'ಆದರ್ಶ' ಕೊಠಡಿಗೆ ಹೋದನು. ಆದರೆ ಅವನು ಏನು ನಿರೀಕ್ಷಿಸಿದ್ದನೋ ಆ ಘಟನೆ ಸಂಭವಿಸಿಬಿಟ್ಟಿತ್ತು. ಅವನ ನೆಚ್ಚಿನ ನಾಯಿ ರಕ್ತಕಾರಿ ಸತ್ತು ಬಿದ್ದಿತ್ತು. ಆ ನಾಯಿ ಕೊಠಡಿಯನ್ನು ಪ್ರವೇಶಿಸಿದ ಕೂಡಲೆ ತನ್ನ ಪ್ರತಿಬಿಂಬವನ್ನು ಮುಂದಿರುವ ಕನ್ನಡಿಯಲ್ಲಿ ಕಂಡು, ಯಾವುದೋ ಬೇರೆ ನಾಯಿ ಬಂದಿದೆಯೆಂದು ತಿಳಿದು ಅದರ ಮೇಲೆ ಆಕ್ರಮಣ ಮಾಡಲು ಕೋಪದಿಂದ ಮುನ್ನುಗ್ಗಿತ್ತು. ಇದರ ಪರಿಣಾಮವಾಗಿ ಕನ್ನಡಿ ಒಡೆದು ನಾಯಿಯ ಮುಖದಲ್ಲಿ ಗಾಯವಾಗಿ ರಕ್ತ ಸುರಿಯತೊಡಗಿತು. ಇನ್ನೊಂದು ಕಡೆ ತಿರುಗಿದಾಗ ಅಲ್ಲೊಂದು ನಾಯಿ ಕಾಣಿಸಿತು. ಅದರ ಮೇಲೆ ಎರಗಲು ಹೋಗಿ ಮತ್ತಷ್ಟು ಗಾಯವಾಗಿ ರಕ್ತ ಸುರಿಯತೊಡಗಿತು. ಇದೇ ರೀತಿ ಮುಂದುವರಿದು ನಾಯಿಯು ರಕ್ತಕಾರಿ ಸತ್ತುಬಿದ್ದಿತ್ತು. ಈ ದೃಶ್ಯವನ್ನು ನೋಡಿ ಶ್ರೀಮಂತನು ಅತ್ಯಂತ ಪರಿತಪಿಸುತ್ತಾ ಮನಸ್ಸಿನಲ್ಲಿಯೇ ಹೀಗೆ ಅಂದುಕೊಂಡನು: "ಆಹಾ! ನಾಯಿಗೆ ಮುಗುಳ್ನಗುವುದು ಬರುತ್ತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!"



ಚಿತ್ರ : ಶ್ರೀಕಾಂತ ಆಚಾರ್ಯ

ಕನ್ನಡಿಯು ಇನ್ನೊಂದು ಪಾಠವನ್ನು ನಮಗೆ ಕಲಿಸಿಕೊಡುತ್ತದೆ. ಅದು ಎಲ್ಲವನ್ನೂ ಸ್ವೀಕರಿಸುತ್ತದೆ, ಯಾವುದನ್ನೂ ಬೇಡವೆನ್ನುವುದಿಲ್ಲ. ಆದರೆ ಯಾವುದನ್ನೂ ಇಟ್ಟುಕೊಳ್ಳುವುದಿಲ್ಲ. ಹಾಗೆಯೇ ಒಂದು ಆದರ್ಶ ಕುಟುಂಬದಲ್ಲಿ ಎಲ್ಲರೊಡನೆಯೂ ಒಂದಾಗಿ, ಯಾವುದರೊಡನೆಯೂ ವ್ಯಾಮೋಹವಿಲ್ಲದೇ ನಿರ್ಲಿಪ್ತರಾಗಿ ಇರಬೇಕಾಗುತ್ತದೆ.

ವ್ಯಕ್ತಿಗತ ಜೀವನ ಉತ್ತಮವಾಗಿದ್ದಾಗ ಮಾತ್ರವೇ ಸಮಷ್ಟಿ ಜೀವನವೂ ಉದಾತ್ತವಾಗಿರುತ್ತದೆ. ಹಾಗೆಯೇ ಕುಟುಂಬದ ಸದಸ್ಯರು ಒಳ್ಳೆಯ ಗುಣಗಳನ್ನು ರೂಢಿಸಿಕೊಂಡಾಗ ಮಾತ್ರ, ಕೌಟುಂಬಿಕ ಜೀವನ ಆಪ್ಯಾಯಮಾನವಾಗಿರುತ್ತದೆ. ಈ ಅಂಶವನ್ನು ವಿದ್ವತ್ಪೂರ್ಣ ವಿಶ್ಲೇಷಣೆ ಮತ್ತು ಸೂಕ್ತ ಉದಾಹರಣೆಗಳಿಂದ ಬಿಂಬಿಸಿರುವ ಪೂಜ್ಯ ಸ್ವಾಮೀಜಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು.

ಕನ್ನಡಿಯು ಎಲ್ಲವನ್ನೂ ಯಥಾರ್ಥವಾಗಿ ಪ್ರತಿಬಿಂಬಿಸುತ್ತದೆ, ತನ್ನದೇನನ್ನೂ ಅದಕ್ಕೆ ಸೇರಿಸುವುದಿಲ್ಲ. ಅಂದರೆ ಅದು ತುಂಬ ವಸ್ತುನಿಷ್ಠವಾದುದು. ಹಾಗೆಯೇ ನಮ್ಮ ಅಂತರಂಗವೂ ಪವಿತ್ರವಾಗಿದ್ದರೆ ಇತರರ ಸುಖದುಃಖಗಳನ್ನು ಯಥಾರ್ಥವಾಗಿ ಕಾಣುವ ಮತ್ತು ಭಾವಿಸುವ ಸಾಮರ್ಥ್ಯವನ್ನು ನಾವು ಪಡೆಯುತ್ತೇವೆ. ಇಲ್ಲಿ ವಾಸ್ತವದೃಷ್ಟಿ ಅತ್ಯಂತ ಮುಖ್ಯ. ನಾವು ಅತಿಯಾಗಿ ಪ್ರೀತಿಸುವವರ ದೋಷಗಳಾವುವೂ ನಮಗೆ ಕಾಣುವುದೇ ಇಲ್ಲ, ಅವರ ತಪ್ಪುಗಳೂ ಸರಿಯಾಗಿರುವಂತೆ ಕಾಣತೊಡಗುತ್ತವೆ. ಹಾಗೆಯೇ ನಮಗಾಗದವರ ದೋಷಗಳೆಲ್ಲವೂ ಎದ್ದುಕಾಣುತ್ತವೆ. ಅನೇಕ ಕುಟುಂಬಗಳಲ್ಲಿ ಕೆಲವು ಮಕ್ಕಳನ್ನು ಅತಿಯಾಗಿ ಪ್ರೀತಿಸುವುದು, ಕೆಲವರನ್ನು ದೂರವಿರಿಸುವುದು – ಈ ರೀತಿ ಮಾಡುವುದರಿಂದ ಮನೆಯಲ್ಲಿ ಅಶಾಂತಿ ಉಂಟಾಗುತ್ತದೆ. ಸಮಾನದೃಷ್ಟಿ ಯಾವುದೇ ಕುಟುಂಬ ಅಥವಾ ಸಂಸ್ಥೆಯ ಸುವ್ಯವಸ್ಥೆಗೆ ಅತ್ಯಂತ ಅವಶ್ಯಕ. ವಿಶೇಷವಾಗಿ ಹಿರಿಯರಾದವರು ಈ ಸಮಾನತೆ ಮತ್ತು ವಾಸ್ತವ ದೃಷ್ಟಿಯಿಂದ ಕೂಡಿದವರಾಗಿರಬೇಕು, ವೈಯಕ್ತಿಕ ಇಷ್ಟಾನಿಷ್ಟಗಳು ಈ ವಿಷಯದಲ್ಲಿ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು. ಪ್ರಿಯಾಪ್ರಿಯ ಭೇದದ ಫಲ ಬರಿ ಅಪ್ರಿಯವೇ ಆಗಿರುತ್ತದೆ. ಇಂಥ ಭೇದದೃಷ್ಟಿ ತಾತ್ಕಾಲಿಕವಾದ ಸಂತೋಷವನ್ನು ನೀಡಬಹುದು, ಆದರೆ ಕೊನೆಯಲ್ಲಿ ಇಡೀ ಕುಟುಂಬವನ್ನೇ ಅದು ಅಸಂತೋಷದಲ್ಲಿ ಮುಳುಗಿಸುತ್ತದೆ. ಅತಿ ಪ್ರೀತಿಯಿಂದ ಪ್ರಿಯನಾದವನು ಭಾವಾತಿರೇಕದಿಂದ ಹಾಳಾಗುತ್ತಾನೆ, ಅಪ್ರಿಯನು ಆ ಭಾವದ ಕೊರತೆಯಿಂದ ಸೊರಗುತ್ತಾನೆ.

ಈ ಭಾವನಾತ್ಮಕವಾದ ಆಸರೆಯ ತಳಪಾಯ ನಿಃಸ್ವಾರ್ಥ ಪ್ರೀತಿ. ತಳಪಾಯ ಗಟ್ಟಿಯಿಲ್ಲದಿದ್ದರೆ ಬೇರೆ ಭಾಗಗಳು ಎಷ್ಟೇ ಗಟ್ಟಿಯಿದ್ದರೂ ಮನೆ ಬಹಳ ಕಾಲ ಉಳಿಯುವುದಿಲ್ಲ. ಹಾಗೆಯೇ ಗಟ್ಟಿಯಾದ ಪ್ರೀತಿಯ ತಳಪಾಯ ಕುಟುಂಬದಲ್ಲಿ ಇಲ್ಲದಿದ್ದರೆ ಬೇರೆ ಎಲ್ಲ ಅನುಕೂಲತೆಗಳಿದ್ದರೂ, ಸುಖಸೌಲಭ್ಯಗಳಿದ್ದರೂ ಅದು ಆದರ್ಶ ಕುಟುಂಬವಾಗುವುದಿಲ್ಲ. ಪ್ರೀತಿಯೇ ನಮಗೆ ಸುಖವನ್ನು ನೀಡುವಂತಹುದು, ವಸ್ತುಗಳಲ್ಲ. ವಿಶೇಷವಾಗಿ ಮಕ್ಕಳು ತಂದೆತಾಯಿಯರ ಪ್ರೀತಿಯನ್ನು ಬಯಸುತ್ತಾರೆ. ಪ್ರೀತಿಯನ್ನು ಪಡೆಯುವುದು ಮತ್ತು ಪ್ರೀತಿಯನ್ನು ವ್ಯಕ್ತಪಡಿಸುವುದು – ಎರಡೂ ಅತ್ಯವಶ್ಯಕ. ಮಕ್ಕಳು ಆಟದ ಬೊಂಬೆಗಳ ಮೂಲಕ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತವೆ. ಮುಕ್ತವಾಗಿ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಲು ಅವಕ್ಕೆ ಆಟದ ಬೊಂಬೆಗಳು ಅವಶ್ಯಕ. ಆದರೆ ಆಟದ ಬೊಂಬೆಗಳ ಮೂಲಕ ಅವು ಪ್ರೀತಿಯನ್ನು ಪಡೆಯಲಾರವು. ಅದನ್ನು ಹಿರಿಯರೇ ಕೊಡಬೇಕು. ಮನೆಯಲ್ಲಿ ಪ್ರೀತಿಯ ವಾತಾವರಣವನ್ನು ಸೃಷ್ಟಿಸದಿದ್ದರೆ ಮಕ್ಕಳ ಬೆಳವಣಿಗೆ ವಿಕೃತವಾಗಬಹುದು. ಅದರಿಂದ ಕೌಟುಂಬಿಕ ಸಾಮರಸ್ಯ ಕೆಟ್ಟುಹೋಗಬಹುದು.

ಹಿಂದೆ ಅಮೆರಿಕದಲ್ಲಿ ನಡೆದ ಒಂದು ಘಟನೆ. ಆರು ವರ್ಷದ ಶಾಲೆಯ ಹುಡುಗನೊಬ್ಬನು ತನ್ನ ತರಗತಿಯಲ್ಲೇ ಓದುತ್ತಿದ್ದ ಕಲ್ಯಾರೋಲ್ಯಾಂಡ್ ಎಂಬ ಆರು ವರ್ಷದ ಹುಡುಗಿಯನ್ನು ಗುಂಡಿಟ್ಟು ಕೊಂದನು. ಇಂತಹ ಅನೇಕ ಬಾಲಾಪರಾಧಗಳು ಪ್ರಪಂಚದಲ್ಲಿ ನಡೆಯುತ್ತವೆ. ಇದಕ್ಕೆ ಕಾರಣವೇನು? ಇದಕ್ಕೆ ಆ ಬಾಲಕನ ಕೌಟುಂಬಿಕ ಹಿನ್ನೆಲೆಯೇ ಬಹುಮಟ್ಟಿಗೆ ಕಾರಣ. ಅವನ ತಂದೆತಾಯಿಗಳಿಬ್ಬರೂ ಅಪರಾಧಿಗಳು. ತಾಯಿ ಮಾದಕವಸ್ತುಗಳ ವ್ಯಸನಿಯಾಗಿದ್ದಳು. ಖಂಡಿತವಾಗಿಯೂ ತಂದೆತಾಯಿಗಳು ಆ ಹುಡುಗನನ್ನು ಸರಿಯಾಗಿ ಸಾಕಿರಲಿಕ್ಕಿಲ್ಲ. ಆ ಹುಡುಗನು ತಂದೆತಾಯಿಯರ ವಾತ್ಸಲ್ಯವನ್ನು ಸವಿದಿರಲಿಕ್ಕಿಲ್ಲ. ಶಿಶುವಾಗಿ ಅವನು ತಾಯಿಯಿಂದ ಕಲಿಯಬೇಕಾದ ಪ್ರಥಮ ಪಾಠವನ್ನೇ ಕಲಿತಿರಲಿಕ್ಕಿಲ್ಲ. ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ: **ಮಾತಾ ಶತ್ರುಃ ಪಿತಾ ವೈರೀ ಯೇನ ಬಾಲೋ ನ ಪಾಠಿತಃ । ನ ಶೋಭತೇ ಸಭಾಮಧ್ಯೇ ಹಂಸಮಧ್ಯೇ ಬಕೋ ಯಥಾ ॥** "ಯಾರಿಂದ ಬಾಲಕನು ವಿದ್ಯಾವಂತನಾಗಿಲ್ಲವೋ ಅಂತಹ ತಂದೆತಾಯಿಗಳು ಅವನ ಪಾಲಿಗೆ ಶತ್ರುಗಳಿದ್ದಂತೆ. ಅವನು ಸಭೆಯ ಮಧ್ಯದಲ್ಲಿ ಹಂಸಗಳ ನಡುವೆ ಇರುವ ಬಕಪಕ್ಷಿಯಂತಿರುತ್ತಾನೆ." ಅಂಥವನು ಸಮಾಜದಲ್ಲಿ 'ಬಕಾಸುರ' ನೇ ಆಗುತ್ತಾನೆ.

ಇದು ಕುಟುಂಬಜೀವನದ ಮಹತ್ವವನ್ನು ಸೂಚಿಸುತ್ತದೆ. ಕುಟುಂಬ ಎನ್ನುವುದು ಒಂದು ಸುಂದರ ಹೂದೋಟ ಇದ್ದಂತೆ. ಅಲ್ಲಿರುವ ಮಕ್ಕಳು ಸಸಿಗಳಿದ್ದಂತೆ. ಅವರನ್ನು ತುಂಬ ಎಚ್ಚರಿಕೆಯಿಂದ, ಪ್ರೀತಿ ವಾತ್ಸಲ್ಯಗಳಿಂದ ಲಾಲಿಸಿ ಪಾಲಿಸಬೇಕು. ಬರಿ ಲಾಲಿಸುವುದು ಮಾತ್ರವಲ್ಲ, ಪಾಲಿಸುವುದೂ ಅತ್ಯಂತ ಮುಖ್ಯ. ಆದರೆ ಒಂದು ವ್ಯತ್ಯಾಸವಿದೆ. ತೋಟಗಾರನು ಎಂತಹ ಜೀವನ ನಡೆಸುತ್ತಾನೆ ಎಂಬುದು ಮುಖ್ಯವಲ್ಲ. ಅವನು ಹೇಗೇ ಇರಲಿ, ಗಿಡಗಳನ್ನು ಸರಿಯಾಗಿ ನೋಡಿಕೊಂಡರೆ ಸಾಕು. ಆದರೆ ಮಕ್ಕಳನ್ನು ಸಾಕಬೇಕಾದರೆ ಸಾಕುವವರ ಜೀವನ ಉತ್ತಮವಾಗಿರಬೇಕಾಗುತ್ತದೆ. ಇಲ್ಲದಿದ್ದರೆ ಅಂತಹ ಪೋಷಕರು ಸಮಾಜಕಂಟಕರನ್ನು ನಿರ್ಮಾಣ ಮಾಡುತ್ತಾರೆ. ಸಮಾಜವನ್ನು ಸುಸ್ಥಿತಿಯಲ್ಲಿಡುವ ಹೊಣೆಗಾರಿಕೆ ನಮ್ಮ ಮೇಲಿದೆ ಎಂಬ ಸಾಮಾಜಿಕ ಪ್ರಜ್ಞೆ ಪೋಷಕರಿಗಿರಬೇಕು.

ಮಕ್ಕಳು ದೊಡ್ಡವರಾಗಿ, ವಿದ್ಯಾವಂತರಾಗಿ, ಒಳ್ಳೆಯ ಕೆಲಸಕ್ಕೆ ಸೇರಿ ತಮ್ಮನ್ನು ಸರಿಯಾಗಿ ನೋಡಿಕೊಳ್ಳಬೇಕು ಎಂಬಷ್ಟೇ ಮನೋಭಾವ ಇದ್ದರೆ, ಹೆಚ್ಚಿನ ಸಂದರ್ಭಗಳಲ್ಲಿ ತಂದೆತಾಯಿಯರ ನಿರೀಕ್ಷೆ ಸಫಲವಾಗುವುದಿಲ್ಲ. ಆದರೆ ಮಕ್ಕಳಿಗೆ ಉತ್ತಮ ಜೀವನವನ್ನು ಕಲಿಸಿಕೊಟ್ಟರೆ ಅವರು ಎಂದೆಂದಿಗೂ ತಂದೆತಾಯಿಯರಿಗೆ ಕೃತಜ್ಞರಾಗಿರುತ್ತಾರೆ. ಆಗ ವಯಸ್ಸಾದ ಮೇಲೆ ತಾಯಿತಂದೆಯರು ವೃದ್ಧಾಶ್ರಮ ಸೇರುವ ಆವಶ್ಯಕತೆ ಇರುವುದಿಲ್ಲ. ಕುಟುಂಬದಲ್ಲಿ ಧನಸಂಪತ್ತಿಗಿಂತ ಗುಣಸಂಪತ್ತೇ ಮುಖ್ಯ. ಸಂಪಾದಿಸಿದ ಹಣ ಯಾರ ಕೈಸೇರುವುದೋ ಅಂಥವರ ಕಡೆ ಗಮನ ಕೊಡಬೇಡವೆ!

ಪ್ರೀತಿಯು ಆದರ್ಶ ಕುಟುಂಬದ ತಳಪಾಯವಾದರೆ, ಪರಸ್ಪರ ಸಹಕಾರ ಅದರ ಸುತ್ತಲಿನ ಗೋಡೆಗಳು. ಗೋಡೆಯು ಮನೆಗೆ ರಕ್ಷಣೆ ನೀಡುವಂತೆ ಪರಸ್ಪರ ಸಹಕಾರವು ಕುಟುಂಬಕ್ಕೆ ಭಾವನಾತ್ಮಕ ರಕ್ಷಣೆಯನ್ನು ನೀಡುತ್ತದೆ. ಕೌಟುಂಬಿಕ ಕೆಲಸಕಾರ್ಯಗಳಲ್ಲಿ ಎಲ್ಲರೂ ಸಹಕರಿಸುವಂತಾದರೆ ಮಾತ್ರವೇ ಮಾನವೀಯ ಸಂಬಂಧ ಉತ್ತಮವಾಗುತ್ತದೆ. ನಾವು ತುಂಬ ಕಷ್ಟಪಟ್ಟು ಕೆಲಸ ಮಾಡುತ್ತಿರುವಾಗ, ಯಾರಾದರೂ ಸಹಾಯಕ್ಕೆ ಬಂದರೆ ಎಷ್ಟೊಂದು ಸಮಾಧಾನವಾಗುತ್ತದೆ! ಆದರೆ ಈ ವಿಷಯದಲ್ಲಿ 'ಅಹಂಕಾರ' ತುಂಬ ಅಡ್ಡಿಯಾಗುತ್ತದೆ. ಅನೇಕ ಕುಟುಂಬಗಳಲ್ಲಿ ಒಬ್ಬ ವ್ಯಕ್ತಿ ಎಷ್ಟೇ ಕಷ್ಟಪಡುತ್ತಿದ್ದರೂ ಅವನ ಸಹಾಯಕ್ಕೆ ಯಾರೂ ಬರುವುದಿಲ್ಲ. ಸಣ್ಣಪುಟ್ಟ ಸಹಾಯವೂ ಎಷ್ಟೊಂದು ವ್ಯಾಪಕವಾದ ಸತ್ಪರಿಣಾಮವನ್ನು ಉಂಟುಮಾಡುತ್ತದೆ ಎಂಬುದನ್ನು ನಾವು ಗಮನಿಸಬೇಕು. ಇಂತಹ ಸಹಾಯಗಳು 'ಸಹಾಯಕ' ಮತ್ತು 'ಸಹಾಯಿತ' ಇಬ್ಬರಿಗೂ ಸುಖವನ್ನು ನೀಡುತ್ತದೆ. ಸಹಾಯವನ್ನು ಸ್ವೀಕರಿಸುವುದೂ ಒಂದು ಕಲೆ. ಸಹಾಯವನ್ನು ಸ್ವೀಕರಿಸಿದಾಗ ಧನ್ಯವಾದ ಅರ್ಪಿಸುವುದನ್ನು ಮರೆಯಬಾರದು. ಅಡುಗೆ ಮಾಡುವಾಗ ತರಕಾರಿ ಹೆಚ್ಚಿಕೊಡುವುದು, ಬಟ್ಟೆ ಒಣಹಾಕುವಾಗ ಅದರಲ್ಲಿ ಕೈಜೋಡಿಸುವುದು, ಊಟದ ಸಮಯದಲ್ಲಿ ಬಡಿಸುವುದು, ಮನೆ ಚೊಕ್ಕಟಗೊಳಿಸುವಾಗ ಅದರಲ್ಲಿ ಸಹಕರಿಸುವುದು – ಇತ್ಯಾದಿ ಸಣ್ಣಪುಟ್ಟ ಸಹಾಯಗಳು ದೊಡ್ಡ ಪರಿಣಾಮವನ್ನೇ ಉಂಟುಮಾಡುತ್ತವೆ. ಏನೂ ಸಹಾಯ ಮಾಡದವರು ಇತರರಿಗೂ ಹೊರೆಯಾಗುವುದು ಮಾತ್ರವಲ್ಲದೆ, ತಮಗೆ ತಾವೇ ಹೊರೆಯಾಗುತ್ತಾರೆ ಮತ್ತು ಇದರಿಂದ ಬಹುವಾಗಿ ದುಃಖಪಡುತ್ತಾರೆ.

ಭೌತಿಕ ಸಹಕಾರದ ಜೊತೆಜೊತೆಗೆ ಭಾವನಾತ್ಮಕವಾದ ಸಹಕಾರವೂ ಅತ್ಯಂತ ಮುಖ್ಯ. ಪರಸ್ಪರ ಪ್ರೀತಿಯಿಂದ ಮಾತನಾಡಿಸುವುದು, ಇತರರಿಗೆ ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳಲು ಅವಕಾಶ ಕೊಡುವುದು, ಅಂದರೆ ಇನ್ನೊಬ್ಬರು ಹೇಳುವುದನ್ನು ಆಲಿಸುವ ಸಾಮರ್ಥ್ಯವನ್ನು ಬೆಳಸಿಕೊಳ್ಳುವುದು ಮುಂತಾದುವು ಬಹಳ ಮುಖ್ಯ. ಪರಸ್ಪರ ಭಾವವಿನಿಮಯದಿಂದ ಮಾನಸಿಕ ಒತ್ತಡ ಕಡಮೆಯಾಗುತ್ತದೆ. ಕೆಲವರು ಅತಿಯಾಗಿ ಮಾತನಾಡುವುದರಿಂದ, ಕೇಳುವ ಸಾಮರ್ಥ್ಯವನ್ನೇ ಕಳೆದುಕೊಳ್ಳುತ್ತಾರೆ, ಅಷ್ಟೇ ಅಲ್ಲದೆ ತಮ್ಮೊಳಗಿರುವುದನ್ನು ಬಚ್ಚಿಡುತ್ತಾರೆ. ಸಂವಹನ ಸಾಧನವೇ ಸಂವರಣ ಸಾಧನವೂ ಆಗುತ್ತದೆ. ಮನೆಯಲ್ಲಿ ಜನರು ಭೌತಿಕವಾಗಿ ಹತ್ತಿರವಿದ್ದರೂ ಭಾವನಾತ್ಮಕವಾಗಿ ದೂರವಿರುತ್ತಾರೆ. ತಮ್ಮ ಭಾವದ ಹಸಿವನ್ನು ತೀರಿಸಿಕೊಳ್ಳಲು ಮೊಬೈಲ್ ಮೂಲಕ ಯಾರೋ ದೂರದವರೊಡನೆ ಸಂಬಂಧ ಇಟ್ಟುಕೊಳ್ಳುತ್ತಾರೆ. ಆದರೆ ಮನೆಯಲ್ಲೇ ಇರುವವರನ್ನು ದೂರವಿಡುತ್ತಾರೆ. ಈಗ ಎಲ್ಲರಿಗೂ 'ದೂರದೃಷ್ಟಿ' ಉಂಟಾಗಿಬಿಟ್ಟಿದೆ! ದೂರದರ್ಶನ, ದೂರಶ್ರವಣಗಳಿಂದಾಗಿ (ಟೆಲಿಫೋನ್) ಹತ್ತಿರದಲ್ಲಿರುವವರನ್ನು ನೋಡುವವರೂ ಇಲ್ಲ, ಕೇಳುವವರೂ ಇಲ್ಲ. ಹೀಗಾಗಿ ಎಲ್ಲ ಕುಟುಂಬಗಳೂ 'ಕಟುಂಬ' ಗಳಾಗಿವೆ (ಎಲ್ಲರೂ ಕಟುವನ್ನೇ ಉಣ್ಣುವಂತಾಗಿದೆ).

ಹಿಂದಿನ ಕಾಲದ ಶ್ರಮವಿಭಜನೆ (Division of labour) ಈಗಿನ ಬದಲಾದ ಪರಿಸ್ಥಿತಿಗೆ ಅನ್ವಯವಾಗುವುದಿಲ್ಲ. ಸ್ತ್ರೀಯರದು ಗೃಹಖಾತೆ, ಪುರುಷರದು ವಿದೇಶಾಂಗ ವ್ಯವಹಾರ – ಆ ಕಾಲ ಹೊರಟುಹೋಯಿತು. ಎಲ್ಲರೂ ಎಲ್ಲವನ್ನೂ ನಿರ್ವಹಿಸುವ ಸಂದರ್ಭ ಈಗ ಒದಗಿಬಂದಿದೆ. ಸ್ತ್ರೀಯರು ನಾಲ್ಕು ಗೋಡೆಗಳ ಮಧ್ಯೆ ಇದ್ದು ಗೃಹಕೃತ್ಯಗಳನ್ನು ನೋಡಿಕೊಳ್ಳುವುದು, ಮಕ್ಕಳು ವೃದ್ಧರನ್ನು ನೋಡಿಕೊಳ್ಳುವುದು ಮತ್ತು ಪುರುಷರು ಹೊರಗಡೆ ಹೋಗಿ ಓಡಿ ದುಡಿದು ಸಂಪಾದಿಸುವುದು – ಇವೆಲ್ಲ ಗತವೈಭವಗಳು (ಪುರುಷರ ದೃಷ್ಟಿಯಲ್ಲಿ). ಈಗ ಪರಿಸ್ಥಿತಿ ಬದಲಾಗಿದೆ. ಸ್ತ್ರೀಯರೂ ವಿದ್ಯಾವಂತರಾಗಿ ದುಡಿದು ಸಂಪಾದಿಸುವ ಕಾಲ ಬಂದಿದೆ. ಆದ್ದರಿಂದ ಪುರುಷರೂ ಸ್ತ್ರೀಯರ ಕೆಲಸ ಮಾಡಲು ಸಿದ್ಧರಿರಬೇಕು. ಸ್ವಭಾವದ ಕಲ್ಪನೆಯನ್ನು ಮುಂದಿಟ್ಟು ಈ ವಿಷಯದಲ್ಲಿ ವಾದ ಮಾಡುವುದರಿಂದ ಪ್ರಯೋಜನವಿಲ್ಲ. ಸ್ವಭಾವವನ್ನು ಬದಲಾಯಿಸುವುದು ಸಾಧ್ಯ. ಪುರುಷರು ಮಾಡಬಹುದಾದ ಕೆಲಸಗಳನ್ನೆಲ್ಲ ಸ್ತ್ರೀಯರು ಮಾಡುತ್ತಿರುವಾಗ ಪುರುಷರು ಏಕೆ ಸ್ತ್ರೀಸಹಜವಾದ ಕೆಲಸಗಳನ್ನು ಮಾಡಬಾರದು?